ಶೀಲಾ. ಎಲ್ಲೋ, ಏನೋ ಕೊಂಡಿ ತಪ್ಪುತ್ತಿದೆ. ಏನು ಕೇಳಿದರೂ ಅಸಹನೆ ತೋರಿಸುವುದನ್ನು ಸೊಸೆ ಅಭ್ಯಾಸ ಮಾಡಿಕೊಂಡಿದ್ದಾಳೆ ಅನಿಸುತ್ತದೆ ಚಿದಾನಂದನಿಗೆ.

ಮನೆಗೆ ಯಾರಾದರೂ ಬಂದರೆ ಮಾವನ ವಾಗ್ಬಾಣಗಳು ಅಕ್ಷಯವಾಗುತ್ತವೆ ಎಂದು ಶೀಲಾಳ ಮತ್ತೊಂದು ಪುಕಾರು. ಮದುವೆಗೋ, ಮುಂಜಿಗೋ ಕರೆಯಲು ಬಂದವರೊಡನೆ ಬೇಕೇ ಆಗಿಲ್ಲದ ಪ್ರಶ್ನೆಗಳ ಸುರಿಮಳೆ ಸುರಿಸುತ್ತಾನೆ ಚಿದಾನಂದ. ತಾನೊಬ್ಬನೇ ಮಾತಾಡುವ ಗುತ್ತಿಗೆ ವಹಿಸಿಕೊಂಡವನಂತೆ ಕೇಳಿದ್ದೇ ಕೇಳುತ್ತಿರುತ್ತಾನೆ. 'ಎಲ್ಲಿ ಮದುವೆ? ಯಾವತ್ತು? ಎಲ್ಲಿ ಬರುತ್ತೆ ಕಲ್ಯಾಣ ಮಂದಿರ?' ಅನ್ನುವುದು ಪುನರಾವರ್ತನೆಯಾಗುತ್ತಲೇ ಇರುತ್ತದೆ. ಬಂದವರು ಉತ್ತರ ಕೊಟ್ಟು ಬಾಯಿ ಮುಚ್ಚುವುದರೊಳಗೆ ಮತ್ತದೇ ಪ್ರಶ್ನೆ. ಕೆಲವರಿಗೆ ತಮಾಷೆ. ಕೆಲವರಿಗೆ ಕನಿಕರ.

'ಮಾವಂಗೆ ಮರೆವು ಬಂದಿದೆ' ಎನ್ನುವ ಸಮಜಾಯಿಷಿ ಕೊಡುತ್ತಾಳೆ ಶೀಲಾ, ಬಂದವರ ಎದುರು ಅವನನ್ನು ಬಿಟ್ಟು ಹಾಕಲಾಗದೆ.

'ನಮಗೇ ಮರೆವು ಶುರುವಾಗಿದೆ. ಇವರ ವಯಸ್ಸಲ್ಲಿ ನಾವು ಏನಾಗಿರ್ತೀವೋ ಯಾರಿಗೆ ಗೊತ್ತು?' ಅನ್ನುವ ಉತ್ತರ ಎಷ್ಟು ಸಾಮಾನ್ಯ ಅಂದರೆ ಬಂದವರ ಬಾಯಿಂದ ಈ ಮಾತು ಬಂದೇ ಬರುತ್ತದೆ ಎಂದು ಕೇಳಿ ಕೇಳಿ ಶೀಲಾಳಿಗೆ ಮೈಯುಂಡು ಹೋಗಿಬಿಟ್ಟಿದೆ. ಅವರು ಹೊರಟು ಹೋದ ಮೇಲೆ ಮಾವನನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ ಶೀಲಾ.

'ಯಾಕೆ ನಮ್ಮ ಮರ್ಯಾದೆ ತೆಗೀತೀರಿ? ಯಾರಾದ್ರೂ ಮನೆಗೆ ಬಂದ್ರೆ ನಿಮ್ಮಷ್ಟಕ್ಕೆ ಒಳಗಿರ್ಬಾರ್ದಾ? ಮದುವೆಪತ್ರಿಕೆ ಕೈಲಿಟ್ಕೊಂಡು ಎಲ್ಲಿ ಮದುವೆ? ಯಾವತ್ತು? ಅಂತ ಕೇಳ್ತೀರಲ್ಲ, ನಾಚಿಕೆಯಾಗಲ್ವಾ?'

'ಮನೆಗೆ ಬಂದವರನ್ನ ಮಾತಾಡಿಸ್ದೆ ಇರೋಕಾಗುತ್ತಾ? ಬಂದವರು ಏನಂದ್ಕೋತಾರೆ?'

'ನಾನಿದೀನಲ್ಲ, ಮಾತಾಡಿ ಕಳಿಸ್ತೀನಿ'.

'ಮನೆ ಯಜಮಾನ ನಾನು ಕಣೇ, ನೀನಲ್ಲ'.

'ಕರ್ಮ, ಕರ್ಮ...' ಸೊಸೆ ತಲೆ ಚಚ್ಚಿಕೊಂಡರೆ ತಾನೇನಂತಹ ಮಹಾಪರಾಧ ನಾಡಿದೆ ಎಂದು ಚಿದಾನಂದನಿಗೆ ಕಸಿವಿಸಿಯಾಗುತ್ತದೆ. ಮಾತಾಡುವುದೂ ದೊಡ್ಡ ತಪ್ಪಾ? ಇತ್ತೀಚೆಗೆ ಅವನ ಮಾತಾಡುವ ಚಪಲ ಪರಾಕಾಷ್ಠೆಗೇರಿದಂತಿದೆ. ಎಲ್ಲಾ ಐವತ್ತರವತ್ತು ವರ್ಷಗಳ ಹಳೇ ಪುರಾಣ. ಪ್ರೈಮರಿಯಲ್ಲಿದ್ದಾಗ ಬೆನ್ನು ಬಿದ್ದಿದ್ದ ನಾಯಿಮರಿಯೊಂದನ್ನು ಮನೆಗೆ ತಂದು ಸಾಕಿದ್ದು, ಅದಕ್ಕೆ ಹೆಸರಿಟ್ಟಿದ್ದು, ಅವನ ಹಾಸಿಗೆ ಬುಡದಲ್ಲೇ ಅದು ಮಲಗುತ್ತಿದ್ದಿದ್ದು, ಒಂದು ಸಲ ಇವನು ಕಾಲಡಿ ನೋಡದೆ ತುಳಿಯುತ್ತಿದ್ದ ಹಾವೊಂದನ್ನು ಅದು ಎಳೆದು ಹಾಕಿ ಇವನನ್ನು ಕಾಪಾಡಿದ್ದು, ಮೇಷ್ಟ್ರು ಬೋರ್ಡಿನ ಮೇಲೆ ಲೆಕ್ಕ ಬರೆಯುತ್ತಿದ್ದಂತೆ ಇವನು ಉತ್ತರ ಹೇಳುತ್ತಿದ್ದಿದ್ದು, ಇಂಥದ್ದೇ ನಾಲ್ಕೆಂಟು ಘಟನೆಗಳನ್ನು ಬಾಯಿಪಾಠ ಮಾಡಿದಂತೆ ಸೊಸೆಯೆದುರು ಹೇಳುತ್ತಿರುತ್ತಿದ್ದ ಚಿದಾನಂದ. ಅವವೇ ಪದಗಳು, ಅವವೇ ವಾಕ್ಯಗಳು, ಅಲ್ಲಲ್ಲಿ ಅಲ್ಪವಿರಾಮಗಳು. ಕೆಲವು ಸಲ ನಾಯಿಯ ಹೆಸರು ಮರೆತು ಹೋಗಿ ಅವನು ತಲೆ ತುರಿಸಿಕೊಳ್ಳುತ್ತಿದ್ದರೆ ಶೀಲಾ ತಾನೇ ಅದರ ಹೆಸರು ಹೇಳಿ ಅವನನ್ನು ಅಚ್ಚರಿಗೊಳಿಸುತ್ತಿದ್ದಳು.

'ಅರೆರೇ, ಅದ್ಹೇಗೆ ಗೊತ್ತಾಯ್ತು ನಿಂಗೆ?' ಬಾಯಿ ಕಳೆದುಕೊಂಡು ಕೇಳುತ್ತಿದ್ದ ಚಿದಾನಂದ.

'ನೀವು ಸಾವಿರ ಸರ್ತಿ ಆ ಕತೆ ಹೇಳಿದೀರಿ'.

'ಸುಳ್ಳೇ. ಇದೇ ಮೊದಲ ಸಲ ಹೇಳ್ತಿರೋದು'.

'ಹಾಗಾದ್ರೆ ನಂಗೆ ಆ ಹೆಸರು ಗೊತ್ತಾಗಿದ್ಹೇಗೆ?'

'ಅಂದಾಜು ಮಾಡಿದ್ದಿ, ಅಷ್ಟೇ'.

ಸಕಾರಣ ವಾದದಿಂದ ಕೂಡ ಅವನನ್ನು ಒಪ್ಪಿಸಲು ಸಾಧ್ಯವಾಗುತ್ತಿರಲಿಲ್ಲ. ಶೀಲಾ ಸಮಾಧಾನ ಮನೋಸ್ಥಿತಿಯಲ್ಲಿದ್ದರೆ ಅವನ ಮಾತಿಗೆ ಕಿವಿ ಕೊಟ್ಟಂತೆ ನಟಿಸುತ್ತಿದ್ದಳು. ಇಲ್ಲದಿದ್ದರೆ ಅವಳಿಗೂ ಕಿರಿಕಿರಿಯಾಗುತ್ತಿತ್ತು.

'ಮಾವ, ಹೇಳಿದ್ದೇ ಹೇಳೋ ಕಿಸಬಾಯಿ ದಾಸನ ಥರ ಅದದನ್ನೇ ಹೇಳ್ಬೇಡಿ. ತಲೆಚಿಟ್ಟು ಹಿಡೀತಿದೆ ನಂಗೆ' ದನಿ ಏರಿಸುತ್ತಿದ್ದಳು. ಭೂತ, ವರ್ತಮಾನಗಳನ್ನು ಮರೆತಂತೆ ವರ್ತಿಸತೊಡಗಿದ್ದ ಚಿದಾನಂದ.

'ನಾನು ಈಗ ಹೋದ್ರೂ ನಮ್ಮ ಗಣಿತದ ಮೇಷ್ಟ್ರು ನನ್ನ ಗುರ್ತು ಹಿಡೀತಾರೆ. ಒಂದ್ಸಲ ಊರಿಗೆ ಹೋಗಿ ಅವರನ್ನ ನೋಡ್ಕಂಬರ್ಬೇಕು. ಎರಡು ದಿನ ರಜಾ ಹಾಕಿ ಕರ್ಕೊಂಡ್ಹೋಗು ಅನ್ಬೇಕು ನಿನ್ನ ಗಂಡಂಗೆ. ನೀನೂ ಬಾ. ಗೌತಮನೂ ಬರ್ಲಿ. ನನ್ನ ಹಳೇ ಫ್ರೆಂಡ್ಸನ್ನ ಭೇಟಿ ಮಾಡಿಸ್ತೀನಿ...'

'ಮಾವ, ಎಷ್ಟೊರ್ಷ ನಿಮಗೆ?'

'ನಂಗೇನು ಗೊತ್ತು, ನೀನು ಹೇಳು'.

'ಎಪ್ಪತ್ತು ದಾಟಿದೆಯಲ್ಲ ಮಾವ. ಪ್ರೈಮರೀಲಿ ನಿಮಗೆ ಕಲಿಸಿದ ಮೇಷ್ಟ್ರು ಇನ್ನೂ ಬದುಕಿರ್ತಾರಾ? ಬದುಕಿದಾರೆ ಅಂದ್ಕೊಂಡ್ರೂ ನಿಮ್ಮ ಗುರುತು ಹಿಡೀತಾರಾ? ನಿಮ್ಮ ಫ್ರೆಂಡ್ಸ್ ಎಲ್ಲಾ ಅಲ್ಲೇ ಬೇರು ಬಿಟ್ಟಿರ್ತಾರಾ? ಎಷ್ಟು ಜನ ನೆಗೆದು ಬಿದ್ದಿದಾರೋ'

'ಏ, ಕೆಟ್ಟ ಮಾತು ಆಡ್ಬೇಡ'.

'ಇರೋ ವಿಷಯ ಹೇಳ್ತಿದೀನಿ. ಹುಚ್ಚು ಹಿಡೀತಿದೆ ನಿಮಗೆ, ಅಷ್ಟೇ...' ಚಿದಾನಂದನ ಬಾಯಿ ಬಡಿದು ಅಲ್ಲಿಂದ ಎದ್ದು ಹೋಗುತ್ತಿದ್ದಳು ಶೀಲಾ.

ಸಂಜೆ ದಣಿದು ಮನೆಗೆ ಬರುವ ಭಾರ್ಗವನಲ್ಲಿ ಹೇಳಿಕೊಳ್ಳಲು ಅವಳಲ್ಲಿ ದೂರುಗಳ ದೊಡ್ಡ ಪಟ್ಟಿ ಇರುತ್ತದೆ. ಸಹಾನುಭೂತಿಯ ಮಾತಾಡುತ್ತಾನೆ ಭಾರ್ಗವ.

'ಅಪ್ಪಂಗೆ ಏನೂ ಗೊತ್ತಾಗಲ್ಲ ಕಣೇ. ಅದಕ್ಕೇ ಹಾಗಾಡ್ತಾರೆ. ಏನ್ಮಾಡೋಕಾಗುತ್ತೆ ಹೇಳು...'

'ನನ್ನ ಫ್ರೆಂಡ್ಸ್ ಬಂದ್ರೂ ಎದುರಿಗೆ ಬಂದು ಕೂರ್ತಾರೆ. ಕೇಳಿದ್ದೇ ಕೇಳ್ತಾರೆ. ಒಳಗೆ ಹೋಗಿ ಅಂತ ಎಲ್ಲರ ಎದುರು ಬಾಯ್ಬಿಟ್ಟು ಹೇಳೋಕೆ ನಂಗೆ ಒಂಥರಾ ಆಗುತ್ತೆ. ಹೆಂಗಸ್ರ ಎದುರು ಬಂದು ಕೂರೋಕೆ ಇವರಿಗೆ ಏನಿರುತ್ತೆ ರಾಜಕಾರ್ಯ? ಏನಂದ್ಕೋತಾರೆ ಅವರು?'

'ಏನೂ ಅಂದ್ಕೊಳ್ಳಲ್ಲ. ನೀನು ಅತೀ ಆಡ್ತಿ...'

'ನಿಮಗೇನಂತೆ, ಬೆಳಿಗ್ಗೆ ಹೋಗಿ ರಾತ್ರಿ ಬರ್ತೀರಿ. ಮನೆಯೊಳಗಿದ್ದು ಅನುಭವಿಸೋದು ನಾನು...'

'ಕೆಲಸ ಬಿಟ್ಬಿಡ್ಲಾ ಹಾಗಾದ್ರೆ?'

'ಅದೊಂದು ಮಾಡ್ಬಿಡಿ. ನನ್ನ ತಲೆ ಪೂರ್ತಿ ಕೆಟ್ಟು ಹೋಗುತ್ತೆ'.

ಹೆಂಡತಿ ಹೊತ್ತಿಗೆ ಸರಿಯಾಗಿ ತನ್ನಪ್ಪನಿಗೆ ಮಾತ್ರೆ ಕೊಡುತ್ತಾಳೋ, ಇಲ್ಲವೋ ಎನ್ನುವ ಅನುಮಾನ ಶುರುವಾಗಿದೆ ಭಾರ್ಗವನಿಗೆ. ಚೆಕಪ್‌ಗೆ ಹೋದಾಗ ಶುಗರ್ ಲೆವೆಲ್ ಜಾಸ್ತಿಯಾಗಿದ್ದನ್ನು ನೋಡಿ ಡಾಕ್ಟರು ಹೆದರಿಸಿದ್ದರು,

'ಹೀಗೇ ಆದ್ರೆ ಇಂಜೆಕ್ಷನ್ ಶುರು ಮಾಡ್ಬೇಕಾಗುತ್ತೆ. ಸರಿಯಾಗಿ ಪಥ್ಯ ಮಾಡೋ ಹಾಗೆ ನೋಡ್ಕೋಬೇಕು ನೀವು'.

'ಹಾಗಲ್ಲ ಡಾಕ್ಟ್ರೇ, ಕಳೆದ ತಿಂಗಳು ಸುಮಾರು ಫಂಕ್ಷನ್‌ಗಳಿದ್ವು. ಊಟಕ್ಕೆ ಹೋಗಿದ್ವಿ. ಅಲ್ಲಿ ಸ್ವೀಟ್ ತಿಂದಿದಾರೆ. ಅದಕ್ಕೇ' ಮಾತ್ರೆಯ ಡೋಸ್ ಹೆಚ್ಚು ಮಾಡಿದ್ದರು ಡಾಕ್ಟ್ರು.

'ಸ್ವಲ್ಪ ಸರಿಯಾಗಿ ನೋಡ್ಕೊಳ್ಳೇ. ಶುಗರ್ ಜಾಸ್ತಿಯಾಗಿದೆ...' ಹೆಂಡತಿಗೆ ಹೇಳಿದ್ದ ಭಾರ್ಗವ.

'ಅದಕ್ಕೆ ನಾನೇನು ಮಾಡ್ಲಿ? ಮೇಲಿನ ಮನೆಗಳಿಗೆ ಹೋಗಿ ಕೂತ್ಕೋತಾರೆ. ಕಾಫಿ ಕೊಡಲ್ಲ, ತಿಂಡಿ ಕೊಡಲ್ಲ, ಊಟ ಹಾಕಲ್ಲ ಅಂತ ಕಂಪ್ಲೇಂಟ್ ಹೇಳ್ತಾರಂತೆ. ಪಾಪ, ವಯಸ್ಸಾದೋರು ಅಂತ ಅವರು ತಿನ್ನಿಸಿ ಕಳಿಸ್ತಾರೆ. ಶುಗರ್ ಹೆಚ್ಚಾಗ್ದೆ ಸಾಯುತ್ತಾ?'

'ಏನೂ ಕೊಡ್ಬೇಡಿ, ಅವರಿಗೆ ಗೊತ್ತಾಗಲ್ಲ ಅಂತ ಹೇಳ್ಬಿಡು ಅವ್ರಿಗೆ...'

'ಬಾಯ್ಬಿಟ್ಟು ಕೇಳಿದ್ರೆ ಕೊಡದೆ ಇರೋಕಾಗುತ್ತೇನ್ರೀ? ಅವರೂ ಮನುಷ್ರಲ್ವಾ? ನಿಜವಾಗ್ಲೂ ಮುದುಕಂಗೆ ಏನೂ ಕೊಟ್ಟಿಲ್ಲ ಅಂದ್ಕೋತಾರೇನೋ. ಒಟ್ನಲ್ಲಿ ನನ್ನ ಮರ್ಯಾದೆ ಮೂರು ಕಾಸಿಗೆ ಹರಾಜು'.

ಮನೆಯಲ್ಲೂ ಶುರುವಾಗಿತ್ತು ಊಟ, ತಿಂಡಿಯ ಕುರಿತಾದ ತಕರಾರು. ಊಟ ಮಾಡಿ ಕೈತೊಳೆದು ಬರುತ್ತಿದ್ದಂತೆ ಇದೀಗ ಸೊಸೆ ತಟ್ಟೆಗೆ ಊಟ ಬಡಿಸಿಕೊಂಡು ಕೂತಿದ್ದರೆ,

'ನಂಗೆ ಊಟ ಹಾಕೋ ಪಂಚಾತ್ಕೆ ಇಲ್ವಾ? ನೀನೊಬ್ಳೇ ಕೂತಿದ್ದಿ...' ಅನ್ನುವ ಮಾತು ಚಿದಾನಂದನ ಬಾಯಿಂದ ಬರುತ್ತಿತ್ತು. ತಿನ್ನುತ್ತಿದ್ದ ಅನ್ನ ಗಂಟಲಲ್ಲಿ ಹಿಡಿದುಕೊಂಡಂತಾಗಿ ಶೀಲಾ ಸಿಟ್ಟಿಗೇಳುತ್ತಿದ್ದಳು.

'ಈಗಿನ್ನೂ ಉಂಡು ಎದ್ದು ಹೋಗಿದ್ದಲ್ವಾ ಮಾವ? ಎಂಜಲು ತಟ್ಟೆ ಅಲ್ಲೇ ಬಿದ್ದಿದೆ ನೋಡಿ.'

'ಯಾರು ಉಂಡಿದ್ದೋ? ನಾನಂತೂ ಊಟ ಮಾಡಿಲ್ಲ'.

'ಅನ್ನದ ಪಾತ್ರೆ ನೋಡಿ, ಅರ್ಧ ಖಾಲಿಯಾಗಿದೆ. ನಾನೊಬ್ಳೇ ಅಷ್ಟೂ ತಿಂತೀನಾ?'

'ಯಾರಿಗ್ಗೊತ್ತು? ನನ್ನ ಉಪಾಸ ಹಾಕಿ ಸಾಯಿಸ್ಬೇಕು ಅಂತ ನೆಪ ಹೇಳ್ತಿ'.

ಅನುಮಾನ. ಹಿಡಿದದ್ದು ಮುಟ್ಟಿದ್ದಕ್ಕೆಲ್ಲಾ ಅನುಮಾನ. ಎರಡು ಹೊತ್ತು ಮಾತ್ರೆ ತಿನ್ನಿಸಬೇಕು ಅಂದರೆ ಕಲಿತ ಬುದ್ಧಿಯನ್ನೆಲ್ಲಾ ಪ್ರಯೋಗಿಸಬೇಕಾದ ಕಾಲ ಬಂದಿತ್ತು. ಬೈದು ಭಂಗಿಸಬೇಕಿತ್ತು.

(ಸಶೇಷ)